# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 438

ಸದಸ್ಯರ ಹೆಸರು : ಡಾ|| ಚಂದ್ರಶೇಖರ್ ಬಿ. ಪಾಟೀಲ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 18.02.2022.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸಾರಿಗೆ ಸಂಸ್ಥೆಯ ಸಿಬ್ಬಂದಿಗೆ ಕಳೆದ 3 ವರ್ಷಗಳಿಂದ ಸಮವಸ್ತ್ರ ವಿತರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ಕಳೆದ 3 ವರ್ಷಗಳಿಂದ ವಿತರಿಸಲಾದ ಸಮವಸ್ತ್ರಗಳ ವಿವರ ಈ ಕೆಳಕಂಡಂತಿದೆ: |
| ಆ. | ಬಂದಿದ್ದಲ್ಲಿ, ಯಾವಾಗ ಸಿಬ್ಬಂದಿಗಳಿಗೆ ಸಮವಸ್ತ್ರ ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು; | . ಈ ಹಿಂದೆ ಸಮವಸ್ತ್ರಗಳ ಖರೀದಿಗೆ ಕರೆಯಲಾದ ಎರಡು ಟೆಂಡರ್‌ಗಳನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿತ್ತು. ಆದ್ದರಿಂದ 2017-18ನೇ ಸಾಲಿನಲ್ಲಿ ವಿತರಿಸಬೇಕಾದ ಸಮವಸ್ತ್ರಗಳನ್ನು ಟೆಂಡರ್ ಮುಖಾಂತರ ಆಗಸ್ಟ್-2020 ರಿಂದ ಮಾರ್ಚ್-2021ರವರೆಗೆ ಖರೀದಿಸಿ ಸಿಬ್ಬಂದಿಗಳಿಗೆ ವಿತರಿಸಲಾಗಿದೆ. (ಕೋವಿಡ್-19ರ ಕಾರಣದಿಂದಾಗಿ ಸರಬರಾಜು ವಿಳಂಬವಾಗಿರುತ್ತದೆ)<br>. 2018-19ನೇ ಸಾಲಿಗೆ ಸಮವಸ್ತ್ರದ ಬದಲಾಗಿ ನಗದನ್ನು ಪಾವತಿಸಲಾಗಿದೆ.<br>. 2019-20 ಮತ್ತು 2020-21ನೇ ಸಾಲಿಗೆ ಸಮವಸ್ತ್ರದ ಬದಲಾಗಿ ನಗದನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>. 2021-22ನೇ ಸಾಲಿನ ಸಮವಸ್ತ್ರಗಳ ಖರೀದಿಗೆ ಮೆ|| ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಗೆ ಖರೀದಿ ಆದೇಶ ನೀಡಲಾಗಿದೆ.<br>. ಮೆ|| ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಂದ ಸರಬರಾಜು ಪಡೆದ ನಂತರ ಸಮವಸ್ತ್ರಗಳನ್ನು ಅರ್ಹ ಸಿಬ್ಬಂದಿಗಳಿಗೆ ವಿತರಿಸಲಾಗುವುದು. |
| ಇ. | ಸಿಬ್ಬಂದಿಯ ಸಮವಸ್ತ್ರ ವಿತರಣೆ ವಿಳಂಬಕ್ಕೆ ಸಂಬಂಧಪಟ್ಟವರ ಮೇಲೆ ಕೈಗೊಂಡ ಕ್ರಮವೇನು? | ಕೋವಿಡ್-19ರ ಹಿನ್ನಲೆಯಲ್ಲಿ ನಿಗಮಗಳಲ್ಲಿ ಆರ್ಥಿಕ ಸಂಕಷ್ಟ ಉಂಟಾದ ಕಾರಣ ಸಮವಸ್ತ್ರ ಖರೀದಿಯಲ್ಲಿ ಸ್ವಲ್ಪ ಮಟ್ಟಿಗೆ ವಿಳಂಬವಾದರೂ ಅರ್ಹ ಸಿಬ್ಬಂದಿಗಳಿಗೆ ಸಮವಸ್ತ್ರ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. |

ಸಂಖ್ಯೆ: ಟಿಡಿ 29 ಟಿಸಿಕ್ಯೂ 2022

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ